**ಸದನದಲ್ಲಿ ಉತ್ತರಿಸುವ ಪ್ರಶ್ನೆಗಳ ಪಟ್ಟಿ**

**ಒಟ್ಟು ಪ್ರಶ್ನೆಗಳು – ೧೫**

**ಪಟ್ಟಿ–೮**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೇ ಅಧಿವೇಶನ**

**ಶುಕ್ರವಾರ, ದಿನಾಂಕ: ೧೪ನೇ ಮಾರ್ಚ್, ೨೦೨೫**

---

**ಸಮೂಹ – V**

೧. ಸಮಾಜ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

೩. ಕೃಷಿ ಸಚಿವರು

೪. ಕಾರ್ಮಿಕ ಸಚಿವರು

೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

## ‘ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ’ಕ್ಕೆ ಸ್ವಂತ ನಿವೇಶನ, ಕಟ್ಟಡ ಇಲ್ಲದಿರುವ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) –**

೧೦೬ (೧೦೦೧) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ವಿ.ವಿ. ಸಿಂಡಿಕೇಟ್ ಸಭೆ ತೀರ್ಮಾನದಂತೆ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ'ಕ್ಕೆ ಕೊಟ್ಟಿರುವ ೪.೨ ಎಕರೆ ಜಾಗಕ್ಕೆ ರಾಜ್ಯ ಸರ್ಕಾರದ ಅನುಮತಿ ಸಿಕ್ಕಿ ಕೇಂದ್ರದ ಹೆಸರಿಗೆ ಮಂಜೂರಾತಿ ಆಗಿದೆಯೇ; ಹಾಗಿದ್ದಲ್ಲಿ, ಮಂಜೂರಾತಿ ಪತ್ರದ ಪ್ರತಿ ನೀಡುವುದು ; ಇಲ್ಲದಿದ್ದಲ್ಲಿ, ಸೂಕ್ತ ಕಾರಣಗಳನ್ನು ತಿಳಿಸುವುದು ;

(ಆ) ನಿವೇಶನ ನೋಂದಣಿಯಾಗದ ಕಾರಣ ಈವರೆವಿಗೂ ಕೇಂದ್ರಕ್ಕೆ ಸ್ವಾಯತ್ತತೆ ಸ್ಥಾನಮಾನ ದೊರೆತಿಲ್ಲ ಎನ್ನುವುದು ನಿಜವೇ ;

(ಇ) ಹಾಗಿದ್ದಲ್ಲಿ, ಪ್ರಾಚೀನ ಇತಿಹಾಸ ಹೊಂದಿರುವ ಕನ್ನಡ ಭಾಷೆಗೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರೆತು ೧೫ ವರ್ಷಗಳೂ ಕಳೆದರೂ ಸ್ವಂತ ನಿವೇಶನ ಹಾಗೂ ಕಟ್ಟಡ ಇಲ್ಲದ ಕಾರಣಕ್ಕೆ ಸ್ವಾಯತ್ತತೆಯೂ ದೊರೆತಿಲ್ಲದಿವುರುವ ಬಗ್ಗೆ ಕೇಂದ್ರಕ್ಕೆ ನಿವೇಶನ/ಕಟ್ಟಡ ಒದಗಿಸುವಲ್ಲಿ ಹಾಗೂ ಸ್ವಾಯತ್ತ ಸಂಸ್ಥೆ ಸ್ಥಾನಮಾನ ದೊರಕಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಈವರೆವಿಗೂ ಕೈಗೊಂಡ ಕ್ರಮಗಳೇನು ;

(ಈ) ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಸ್ವಾಯತ್ತತೆ ಧಕ್ಕಿಸುವ ಸಲುವಾಗಿ ಒತ್ತಾಯಿಸಿ ಬರೆದ ಪತ್ರಗಳ ಪ್ರತಿಗಳನ್ನು ನೀಡುವುದು ;

(ಉ) ಮೈಸೂರಿನಿಂದ ಬೆಂಗಳೂರಿಗೆ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ' ಸ್ಥಳಾಂತರಿಸಲು ಕೇಂದ್ರ ಅಥವಾ ರಾಜ್ಯ ಸರ್ಕಾರ ಉದ್ದೇಶಿಸಿದೆಯೇ ; ಇದ್ದಲ್ಲಿ, ಕಾರಣಗಳೇನು ; (ಸಂಪೂರ್ಣ ವಿವರ ನೀಡುವುದು)

(ಊ) ಸದರಿ ಅಧ್ಯಯನ ಕೇಂದ್ರದ ಕಛೇರಿಯನ್ನು ಮೈಸೂರಿನಲ್ಲಿಯೇ ಸ್ಥಾಪಿಸಲು ರಾಜ್ಯ ಸರ್ಕಾರದ ಅನುಮತಿ ಇದೆಯೇ ?

# ಜೇಷ್ಠತೆಯಲ್ಲಿ ಕಿರಿಯರಾದವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ನೇಮಿಸಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ ) –**

೧೦೭ (೯೫೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಖಾಲಿಯಿರುವ ಗ್ರಾಮೀಣ ಉದ್ಯೋಗ ಸಹಾಯಕ ನಿರ್ದೇಶಕರು ಮತ್ತು ಪಂಚಾಯತ್ ರಾಜ್ ಸಹಾಯಕ ನಿರ್ದೇಶಕರ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಹುದ್ದೆಗಳಿಗೆ ಯಾವ ಸುತ್ತೋಲೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕ ಮಾಡಲಾಗಿದೆ ;

(ಇ) ಪ್ರಸ್ತುತ ಹಲವು ಜಿಲ್ಲೆಗಳಲ್ಲಿ ಜೇಷ್ಠತೆಯಲ್ಲಿ ಹಿರಿಯರಾದವರನ್ನು ಕಡೆಗಣಿಸಿ, ಕಿರಿಯರಾದವರನ್ನು ನೇಮಕ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಪ್ರಸ್ತುತ ಜಿಲ್ಲಾ ಜೇಷ್ಠತೆಯಲ್ಲಿ ಯಾವ ಕ್ರಮಾಂಕದಲ್ಲಿರುವ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ತಾತ್ಕಾಲಿಕವಾಗಿ ಸಹಾಯಕ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ ; ಅವರಿಗಿಂತ ಜೇಷ್ಠತೆಯಲ್ಲಿ ಹಿರಿಯರಾದ ನೌಕರರ ಸಂಖ್ಯೆ ಎಷ್ಟು ; ಅವರನ್ನು ನೇಮಕ ಮಾಡದೆ ನಿರ್ಲಕ್ಷ್ಯ ಮಾಡಲು ಕಾರಣಗಳೇನು ; ಸದರಿ ಹುದ್ದೆ ನಿರ್ವಹಿಸಲು ತರಬೇತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ಈ ರೀತಿಯಲ್ಲಿ ಸುತ್ತೋಲೆ ಮತ್ತು ಸೇವಾ ನಿಯಮಗಳಿಗೆ ವಿರುದ್ಧವಾಗಿ ನೇಮಕಾತಿ ಮಾಡುವುದರಿಂದ ನೌಕರರ ಆತ್ಮಸ್ಥೈರ್ಯ ಕುಂದಿಸುವುದರ ಜೊತೆಗೆ ಅವರ ಆತ್ಮಗೌರವಕ್ಕೆ ಚ್ಯುತಿ ತಂದಂತೆ ಆಗುವುದಿಲ್ಲವೇ ;

(ಊ) ಈ ನಿಯಮ ಬಾಹಿರವಾದ ನೇಮಕಾತಿಯನ್ನು ರದ್ದುಗೊಳಿಸಿ ಜೇಷ್ಠತೆಯಲ್ಲಿ ಹಿರಿಯರಾದವರನ್ನು ನೇಮಕ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?

## ರಾಜ್ಯದಲ್ಲಿ ವಿಕಲಚೇತನರಿಗೆ ವಿಮಾ ಸೌಲಭ್ಯವನ್ನು ಒದಗಿಸುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೮ (೮೮೧) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿಶೇಷವಾಗಿ ವಿಕಲಚೇತನರಿಗೆ ಸರ್ಕಾರದಿಂದ ನೀಡಲಾಗುವ ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳು ಯಾವುವು ; (ಮಾಹಿತಿ ಒದಗಿಸುವುದು)

(ಆ) ವಿಶೇಷವಾಗಿ ವಿಕಲಚೇತನರಿಗೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲೂ ಬಳಸುವಂತೆ ಆರೋಗ್ಯ ವಿಮೆಯನ್ನು ಸರ್ಕಾರದ ವತಿಯಿಂದ ಭರಿಸಲು ಮುಂದಾಗುವುದೇ ; ಇದರ ಬಗ್ಗೆ ಸರ್ಕಾರದ ನಿಲುವೇನು ; (ಮಾಹಿತಿ ಒದಗಿಸುವುದು)

(ಇ) ಜೀವನ ನಿರ್ವಹಣೆಗೂ ಕಷ್ಟಪಡುವ ಇವರುಗಳಿಗೆ ಸರ್ಕಾರವು ಕನಿಷ್ಠ ಉಚಿತ ಆರೋಗ್ಯ ವಿಮೆಗಳನ್ನು ನೀಡಲು ಇರುವ ತೊಂದರೆಗಳೇನು ; ಇದನ್ನು ಜಾರಿಗೊಳಿಸಲು ಸರ್ಕಾರದ ತೀರ್ಮಾನಗಳೇನು ? (ವಿವರಗಳನ್ನು ನೀಡುವುದು)

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣಕ್ಕಾಗಿ ಮೀಸಲಿಟ್ಟ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಅನುದಾನದ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೯ (೯೬೬ + ೯೬೮) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೨–೨೩ನೇ ಸಾಲಿನಿಂದ ೨೦೨೪–೨೫ನೇ ಸಾಲಿನವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳ ಕಲ್ಯಾಣಕ್ಕಾಗಿ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಯೋಜನೆಯಡಿ ಮೀಸಲಿಟ್ಟ ಹಾಗೂ ಬಿಡುಗಡೆಯಾದ ಅನುದಾನವೆಷ್ಟು ;

(ಆ) ಈ ಅನುದಾನದಲ್ಲಿ ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನಲ್ಲಿ (ಜೂನ್–೨೦೨೪)ರ ಎಷ್ಟು ಮೊತ್ತವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ಮೀಸಲಿರಿಸಿ ವರ್ಗಾಯಿಸಿದೆ ; ವರ್ಗಾಯಿಸಿದ ಅನುದಾನದಲ್ಲಿ ಎಷ್ಟು ಮೊತ್ತವನ್ನು ಬಳಕೆ ಮಾಡಲಾಗಿದೆ ; (೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನ ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನ ಫೆಬ್ರವರಿ–೨೦೨೫ರ ಅಂತ್ಯದವರೆಗೆ ಎಷ್ಟು ಮೊತ್ತವನ್ನು ಗ್ಯಾರಂಟಿ ಯೋಜನೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ ವೆಚ್ಚ ಮಾಡಲಾಗಿದೆ ; ಪ್ರತಿಯೊಂದು ಗ್ಯಾರಂಟಿ ಯೋಜನೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಸಂಖ್ಯೆ ಎಷ್ಟು ; (ಪ್ರತಿಯೊಂದು ಗ್ಯಾರಂಟಿ ಯೋಜನೆಯ ಅನುಸಾರ ಮಾಹಿತಿ ನೀಡುವುದು)

(ಈ) ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ಗ್ಯಾರಂಟಿ ಯೋಜನೆಗೆ ವರ್ಗಾಯಿಸಿದ್ದಲ್ಲಿ, ಅದನ್ನು ಬಳಕೆ ಮಾಡಿಕೊಂಡಿದ್ದಲ್ಲಿ ಒಂದು ವೇಳೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳ ಮಾಹಿತಿ ಇಲ್ಲದಿದ್ದರೆ, ಅವರು ಫಲಾನುಭವಿ ಆಗಿಲ್ಲದಿದ್ದರೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯ ಹಣವನ್ನು ದುರ್ಬಳಕೆ ಮಾಡಿಕೊಂಡಂತೆ ಹಾಗೂ ಎಸ್‌ಸಿಎಸ್‌ಪಿ/ ಟಿಎಸ್‌ಪಿ ಕಾಯ್ದೆಯ ಉಲ್ಲಂಘನೆಯಾಗುವುದಿಲ್ಲವೆ ; ದಲಿತರ ಕಲ್ಯಾಣಕ್ಕೆ ಹಿನ್ನೆಡೆಯಾಗುವುದಿಲ್ಲವೆ ;

(ಉ) ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಹಣವನ್ನು ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿರುವುದು ಈ ಜನಾಂಗಕ್ಕೆ ಮಾಡಿದ ಅನ್ಯಾಯವಲ್ಲವೇ ; ಆ ವರ್ಗಗಳ ಶ್ರೇಯೋಭಿವೃದ್ಧಿಗೆ ಬಳಕೆ ಮಾಡಬೇಕಾದ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಿದಂತೆ ಆಗುವುದಲ್ಲದೇ, ಇವರುಗಳ ಸಾಂವಿಧಾನಿಕ ಹಕ್ಕನ್ನು ಕಸಿದಂತೆ ಆಗುವುದಿಲ್ಲವೆ ;

(ಊ) SCP/TSP ಯೋಜನೆಯಲ್ಲಿ ಮೀಸಲಿರಿಸಿದ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲು ಕಾಯ್ದೆಯಲ್ಲಿ ಅವಕಾಶ ಇದೆಯೇ; ಇಲ್ಲದಿದ್ದಲ್ಲಿ, ಸರ್ಕಾರ ಸದರಿ ಅನುದಾನವನ್ನು ಯಾವ ಆಧಾರದ ಮೇಲೆ ಗ್ಯಾರಂಟಿಗಳಿಗೆ ಬಳಸಿಕೊಂಡಿದೆ ; ಈ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಬಳಕೆ ಮಾಡಿರುವ ಹಣವನ್ನು ಮತ್ತೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಲ್ಲಿ ವಿನಿಯೋಗ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ ?

## ಮನರೇಗಾ ಯೋಜನೆಯಡಿ ಸುಮಾರು ೬೬೯.೯೨ ಕೋಟಿ ರೂಪಾಯಿ ದುರ್ಬಳಕೆಯಾಗಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೦ (೯೦೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಿಂದ, ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೂ ಎಷ್ಟು ಅನುದಾನ ಬಿಡುಗಡೆಯಾಗಿದೆ ; ಬಿಡುಗಡೆಯಾಗಿರುವ ಅನುದಾನವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಗಿದೆಯೇ ;

(ಆ) ರಾಜ್ಯದಲ್ಲಿ ಒಂದೇ ವರ್ಷದಲ್ಲಿ ೬೬೯.೯೨ ಕೋಟಿ ರೂಪಾಯಿಗಳು ದುರ್ಬಳಕೆ ಆಗಿರುವುದು ಲೆಕ್ಕ ಪರಿಶೋಧನಾ ವರದಿಯಲ್ಲಿ ಪತ್ತೆಯಾಗಿರುವುದು ನಿಜವೇ ; ಹಾಗಿದ್ದಲ್ಲಿ, ಯಾವ ಇಲಾಖೆಯಲ್ಲಿ ಎಷ್ಟು ಹಣ ದುರುಪಯೋಗವಾಗಿದೆ ; (ಅದರ ಪೂರ್ಣ ವಿವರ ಒದಗಿಸುವುದು)

(ಇ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೃತಪಟ್ಟವರ ಹೆಸರಿನಲ್ಲಿ ೨.೮೯ ಕೋಟಿ ರೂಪಾಯಿಗಳನ್ನು ಕೂಲಿ ರೂಪದಲ್ಲಿ ನೀಡಲಾಗಿದೆಯೇ ; ಹಾಗಿದ್ದಲ್ಲಿ, ಇಂಥ ಎಷ್ಟು ಪ್ರಕರಣಗಳು ಬೆಳಕಿಗೆ ಬಂದ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಈ) ೨೦೧೩-೧೪ನೇ ಸಾಲಿನಿಂದ ೨೦೨೨-೨೩ನೇ ಸಾಲಿನವರೆಗೆ ಕೈಗೊಂಡಿರುವ ಕಾಮಗಾರಿಗಳ ಕೂಲಿ ಮೊತ್ತದಲ್ಲಿ ಸುಮಾರು ರೂ. ೪,೫೦೦ ಕೋಟಿ ಮೊತ್ತಕ್ಕೆ ಯಾವುದೇ ದಾಖಲೆ ಸಲ್ಲಿಕೆಯಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸಂಬಂಧಪಟ್ಟ ಅಧಿಕಾರಿಗಳ ಜವಾಬ್ದಾರಿ ಏನು ?

## ಕೊಂಕಣಿ ಸಾಹಿತ್ಯ ಅಕಾಡೆಮಿಯ ಕಟ್ಟಡದ ಕುರಿತು

**ಶ್ರೀ ಐವಾನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೧ (೯೪೫) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಂಕಣಿ ಸಾಹಿತ್ಯ ಅಕಾಡೆಮಿಯ ಕಟ್ಟಡವು ಸಂಪೂರ್ಣಗೊಳ್ಳದೇ ಕೊಂಕಣಿ ಚಟುವಟಿಕೆಗಳನ್ನು ನಿರ್ವಹಿಸಲು ಸಾಧ್ಯವಾಗದಿರುವುದು

ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗೂ ಯಾವಾಗ ಪೂರ್ಣಗೊಳ್ಳುವುದು ; ಈ ಕಟ್ಟಡಕ್ಕೆ ಸರ್ಕಾರ ಅನುದಾನ ಒದಗಿಸಲು ಕೈಗೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಆ) ಕೊಂಕಣಿ ಅಕಾಡೆಮಿಯ ಕಟ್ಟಡವು ಅರ್ಧದಲ್ಲಿ ನಿಲ್ಲಿಸಿದ್ದರೂ ಇದನ್ನು ಸಂಪೂರ್ಣಗೊಳಿಸಲು ಕ್ರಮಕೈಗೊಳ್ಳದೆ ಇರಲು ಕಾರಣಗಳೇನು ; (ವಿವರ ನೀಡುವುದು)

(ಇ) ಕೊಂಕಣಿ ಸಾಹಿತ್ಯ ಅಕಾಡೆಮಿಯು ೨೦೨೩–೨೪, ೨೦೨೪–೨೫ರಲ್ಲಿ ಕೈಗೊಂಡ ಕಾರ್ಯಕ್ರಮಗಳು ಎಷ್ಟು ; ಒದಗಿಸಿದ ಅನುದಾನ ಎಷ್ಟು ; (ವಿವರ ನೀಡುವುದು)

(ಈ) ಕೊಂಕಣಿ ಅಕಾಡೆಮಿಯು ಕಾರ್ಯವು ಅನೇಕ ಜಿಲ್ಲೆಗಳಲ್ಲಿ ವಿಸ್ತರಿಸಿರುವುದರಿಂದ ಅದರ ಚಟುವಟಿಕೆಗಳಲ್ಲಿ ಭಾಗವಹಿಸಲು ಅಧ್ಯಕ್ಷರಿಗೆ ವಾಹನವನ್ನು ಒದಗಿಸಲು ಸರ್ಕಾರ ಕ್ರಮಕೈಗೊಳ್ಳದೇ ಇರಲು ಕಾರಣಗಳೇನು ; ಈ ಬಗ್ಗೆ ಎಂದು ಕ್ರಮ ಕೈಗೊಳ್ಳಲಾಗುವುದು ; (ವಿವರ ನೀಡುವುದು)

(ಉ) ಅಕಾಡೆಮಿಯ ಸದಸ್ಯರಿಗೆ ಭತ್ಯೆ ಏರಿಕೆ ಮಾಡಬೇಕೆಂಬ ಬೇಡಿಕೆ ಇದ್ದು, ಇಲಾಖೆ ಕ್ರಮಕೈಗೊಳ್ಳುವುದೇ; ಹಾಗೂ ಕನಿಷ್ಠ ರೂ.೧೦,೦೦೦/– ಗಳನ್ನು ತಿಂಗಳೊಂದಕ್ಕೆ ನೀಡಲು ಕ್ರಮಕೈಗೊಳ್ಳುವುದೇ ; (ವಿವರ ನೀಡುವುದು)

(ಊ) ರಾಜ್ಯದಲ್ಲಿ ಕೊಂಕಣಿ ಭಾಷೆಯನ್ನು ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ಪಿ.ಯು.ಸಿ.ಯಲ್ಲಿ ಕೊಂಕಣಿ ಕಲಿಸಲು ಸರ್ಕಾರ ಕ್ರಮಕೈಗೊಂಡಿದೆಯೇ ; ಎಷ್ಟು ಶಿಕ್ಷಕರನ್ನು ನೇಮಿಸಿದೆ ; ಇದಕ್ಕೆ ತಗಲುವ ವೆಚ್ಚ ಎಷ್ಟು ? (ವಿವರ ನೀಡುವುದು)

## ರಕ್ತ ಹೀನತೆ ಇರುವ ಕಾರ್ಮಿಕರಿಗೆ ಕಿಟ್ ನೀಡುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೨ (೮೭೫) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಕ್ತ ಹೀನತೆ ಇರುವ ಕಟ್ಟಡ ಕಾರ್ಮಿಕರಿಗೆ ನೀಡಲಾಗುವ ಕಿಟ್‌ನಲ್ಲಿ ಯಾವ ಯಾವ ವಸ್ತುಗಳನ್ನು ನೀಡಲಾಗುತ್ತದೆ ; (ವಿವರ ನೀಡುವುದು)

(ಆ) ಪ್ರತಿ ಕಾರ್ಮಿಕ ಆಯುಕ್ತರ ಕಾರ್ಯ ವ್ಯಾಪ್ತಿಯಲ್ಲಿ ೩೪,೦೦೦ ಕಾರ್ಮಿಕರಿಗೆ ಆಯುರ್ವೇದ ಔಷಧ ನೀಡಬೇಕು ಎಂಬುದಾಗಿ ಶಿಫಾರಸ್ಸು ಮಾಡಿದವರು ಯಾರು ; ಯಾವ ವೈದ್ಯಕೀಯ ಮಂಡಳಿಯ ಶಿಫಾರಸ್ಸಿನ ಆಧಾರದಲ್ಲಿ ಆಯುರ್ವೇದ ನ್ಯೂಟ್ರೀಷನ್ ಕಿಟ್ ನೀಡಲಾಗುತ್ತದೆ ; (ವಿವರ ನೀಡುವುದು)

(ಇ) ಪ್ರತಿ ಕಾರ್ಮಿಕ ಆಯುಕ್ತರ ಅಧಿಕಾರ ವ್ಯಾಪ್ತಿಯಲ್ಲಿ ನಿಖರವಾಗಿ ೩೩,೫೦೦ ಕಟ್ಟಡ ಕಾರ್ಮಿಕರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ ಎಂಬುದಾಗಿ ವರದಿ ನೀಡಿದವರು ಯಾರು ; ಈ ಕಾರ್ಮಿಕರು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ ಎಂಬುದಾಗಿ ಯಾವ ವೈದ್ಯರು ಯಾವ ವಿಧಾನದಲ್ಲಿ ಪರೀಕ್ಷೆ ನಡೆಸಿರುತ್ತಾರೆ ; (ಎಲ್ಲಾ ಕಾರ್ಮಿಕರ ವೈದ್ಯಕೀಯ ದಾಖಲೆಗಳೊಂದಿಗೆ ವಿವರ ನೀಡುವುದು)

(ಈ) ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರಿಗೆ ನೀಡಲಾಗುವ ನ್ಯೂಟ್ರೀಷನ್ ಕಿಟ್‌ನಲ್ಲಿ ರೂ.೭೪ ಕೋಟಿ ಭ್ರಷ್ಟಾಚಾರ ನಡೆಸಿರುವ ಬಗ್ಗೆ ಸರ್ಕಾರದ ನಿಲುವೇನು ? (ವಿವರ ನೀಡುವುದು)

## ಬಸವಕಲ್ಯಾಣದಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣ ಕುರಿತು

**ಡಾ: ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೩ (೧೦೦೨) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಶ್ವಗುರು ಬಸವೇಶ್ವರರನ್ನು ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಎಂದು ಸರ್ಕಾರ ಘೋಷಿಸಿದ್ದು, ಇದಕ್ಕೆ ಪೂರಕವಾಗಿ ಸರ್ಕಾರದಿಂದ ಯಾವುದಾದರೂ ಕಾರ್ಯಕ್ರಮವನ್ನು ರೂಪಿಸಲಾಗಿದೆಯೇ ; ರೂಪಿಸಿದ್ದರೆ, ಈ ಬಗ್ಗೆ ಸರ್ಕಾರದ ಚಿಂತನೆಯೇನು ;

(ಆ) ಬೀದರ್ ಜಿಲ್ಲೆ, ಬಸವಕಲ್ಯಾಣದಲ್ಲಿ ಶರಣರ ವಚನಗಳನ್ನು ಪ್ರಚಾರ ಪಡಿಸಲು ಗಾಯನ, ನಾಟಕ, ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ಸಾಂಸ್ಕೃತಿಕ ಭವನ ಇದೆಯೇ ; ಇಲ್ಲದಿದ್ದಲ್ಲಿ, ಸಾಂಸ್ಕೃತಿಕ ಭವನ ನಿರ್ಮಿಸಲು ಯೋಜನೆ ಹಾಕಿಕೊಳ್ಳಲಾಗುವುದೇ ;

(ಇ) ಈ ಸಾಂಸ್ಕೃತಿಕ ಭವನ ನಿರ್ಮಾಣ ಮಾಡಲು ಹಣ ಮೀಸಲಿರಿಸಿ ಯಾವ ಕಾಲಮಿತಿಯೊಳಗೆ ನಿರ್ಮಾಣ ಮಾಡಲಾಗುವುದು ?

## ಗ್ರಾಮಠಾಣ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಮನೆ ಇದ್ದವರಿಗೆ ಇ–ಖಾತೆ ನೀಡುವ ಕುರಿತು

**ಶ್ರೀ ಟಿ.ಎನ್. ಜವರಾಯಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೪ (೯೦೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿರುವ ಗ್ರಾಮಠಾಣ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿ ಅನಾದಿ ಕಾಲದಿಂದಲೂ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವ ನಿವಾಸಿಗಳಿಗೆ ಹಕ್ಕು ಪತ್ರವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಆ) ಸ್ಥಳೀಯ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಅಭಿಯಾನದ ಮಾದರಿಯಲ್ಲಿ ಇ–ಖಾತಾ ನೀಡುವ ಪ್ರಕ್ರಿಯೆ ನಡೆಸಲು ಸೂಚನೆ ನೀಡಿದ್ದು,

ಈ ಬಗ್ಗೆ ಸರ್ಕಾರದ ಆದೇಶ ಕಾರ್ಯಗತಗೊಳಿಸಲಾಗಿದೆಯೇ ; (ಸರ್ಕಾರದ ಸುತ್ತೋಲೆ/ಆದೇಶದ ಪ್ರತಿಯನ್ನು ಒದಗಿಸುವುದರೊಂದಿಗೆ ವಿವರಣೆ ನೀಡುವುದು)

(ಇ) ಗ್ರಾಮಠಾಣಗಳಿಗೆ, ಊರುಗುಪ್ಪೆ ಸರ್ವೆ ನಂಬರ್‌ನಲ್ಲಿರುವ ಸ್ವತ್ತು ಆರ್.ಟಿ.ಸಿ.ನಲ್ಲಿ ಗ್ರಾಮಸ್ಥರು ಎಂದು ಬರುತ್ತಿದ್ದು, ಇಂತಹ ಸ್ವತ್ತುಗಳಿಗೆ ಆರ್.ಟಿ.ಸಿ. ತರಲು ಸಾಧ್ಯವೇ ; ಭೂಪರಿವರ್ತನೆ ಮಾಡಿಸಲು ಸಾಧ್ಯವೇ ; ಸರ್ಕಾರ ಈ ಸಮಸ್ಯೆಯನ್ನು ಬಗೆಹರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲಾಗುವುದೇ ? (ಮಾಹಿತಿ ನೀಡುವುದು)

## ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮಗಳ ಕಾರ್ಯಕ್ರಮಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೧೫ (೯೮೪) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಇರುವ ನಿಗಮಗಳೆಷ್ಟು ; ಅವು ಯಾವುವು ಹಾಗೂ ಅವುಗಳನ್ನು ಸ್ಥಾಪಿಸಿದ ಉದ್ದೇಶಗಳೇನು ;

(ಆ) ಯಾವ ಯಾವ ನಿಗಮಗಳಡಿ ಜಾತ್ರೆಗಳನ್ನು ಯಾವ ಸಂಸ್ಥೆಗಳ ಮೂಲಕ ಆಯೋಜಿಸಲಾಗುತ್ತಿದೆ ; ಯಾವ ಕಾರ್ಯಕ್ರಮಕ್ಕೆ ಹಣವನ್ನು ಖರ್ಚು ಮಾಡಲಾಗುತ್ತಿದೆ ; ಜಾತ್ರೆಗಳಿಗಾಗಿ ಈವರೆಗೆ ಖರ್ಚು ಮಾಡಲಾದ ಮೊತ್ತವೆಷ್ಟು ; ಜಾತ್ರೆಗಳ ಆಯೋಜನೆಯಿಂದಾಗುವ ಪ್ರಯೋಜನಗಳೇನು ; (ವರ್ಷವಾರು ಕಾರ್ಯಕ್ರಮವಾರು ಮಾಹಿತಿ ನೀಡುವುದು)

(ಇ) ವಿವಿಧ ನಿಗಮಗಳಡಿ ಫಲಾನುಭವಿಯಾಧಾರಿತ ನೇರ ಸೌಲಭ್ಯ ಯೋಜನೆಗಳಿಗೆ ವೆಚ್ಚ ಮಾಡಲಾದ ಅನುದಾನವೆಷ್ಟು ; ಇತರೆ ಅಭಿವೃದ್ಧಿ

ಕಾರ್ಯಕ್ರಮಗಳಿಗೆ ಖರ್ಚು ಮಾಡಿದ ಹಣವೆಷ್ಟು ; (ನಿಗಮವಾರು ಹಾಗೂ ಕಾರ್ಯಕ್ರಮವಾರು ಮಾಹಿತಿ ನೀಡುವುದು)

(ಈ) ಫಲಾನುಭವಿಯಾಧಾರಿತ ನೇರ ಅಭಿವೃದ್ಧಿ ಹೊರತುಪಡಿಸಿ ಇತರ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಿದ ಮೊತ್ತವೆಷ್ಟು ;

(ಉ) ಭಾರತೀಯ ಸಂವಿಧಾನದ ರಕ್ಷಣೆಗಾಗಿ ವಿವಿಧ ನಿಗಮಗಳಡಿಯಲ್ಲಿ ಕೈಗೊಳ್ಳಲಾಗಿರುವ ಕಾರ್ಯಕ್ರಮಗಳಾವುವು ; ಈ ಕಾರ್ಯಕ್ರಮಗಳನ್ನು ಯಾವ ಸಂಸ್ಥೆಗಳ ಮೂಲಕ ಕೈಗೊಳ್ಳಲಾಗಿದೆ ಹಾಗೂ ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು ? (ನಿಗಮವಾರು, ಕಾರ್ಯಕ್ರಮವಾರು ಮಾಹಿತಿ ನೀಡುವುದು)

## ಜಲಜೀವನ್ ಮಿಷನ್ ಯೋಜನೆಯ ಅನುಷ್ಠಾನದಲ್ಲಿನ ಲೋಪದೋಷಗಳ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೬ (೯೨೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮನೆ ಮನೆಗೆ ನಲ್ಲಿ ಸಂಪರ್ಕ ಕಲ್ಪಿಸಿ ಶುದ್ಧ ಕುಡಿಯುವ ನೀರೊದಗಿಸುವ ಜಲ ಜೀವನ್ ಮಿಷನ್ ಯೋಜನೆಯು ಪ್ರಾರಂಭವಾಗಿದ್ದು ಯಾವಾಗ ; ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಈವರೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ; ಹೊಂದಾಣಿಕೆ ಮೊತ್ತವಾಗಿ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ರಾಜ್ಯದ ಎಷ್ಟು ಗ್ರಾಮಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಯಶಸ್ವಿಯಾಗಿ ನೀರು ಸರಬರಾಜು ಮಾಡಲಾಗುತ್ತಿದೆ ; ಎಷ್ಟು ಕಾಮಗಾರಿಗಳು ಬಾಕಿ

ಇವೆ ; ಸದರಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಿಗೆ ಈವರೆಗೆ ಎಷ್ಟು ವೆಚ್ಚ ಭರಿಸಲಾಗಿದೆ ; (ಕಾಮಗಾರಿವಾರು ವಿವರವನ್ನು ಜಿಲ್ಲಾವಾರು ನೀಡುವುದು)

(ಇ) ಈ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ ಹಲವಾರು ಲೋಪದೋಷಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಈ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ ; (ವಿವರ ಒದಗಿಸುವುದು)

(ಈ) ಈ ಯೋಜನೆಯನ್ನು ಫಲಪ್ರದ ಯೋಜನೆಯನ್ನಾಗಿಸಲು ಹಾಗೂ ಶೀಘ್ರವಾಗಿ ಪೂರ್ಣಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ? (ವಿವರ ಒದಗಿಸುವುದು)

## ಅಂಗನವಾಡಿ ಸಿಬ್ಬಂದಿಗಳ ವೇತನ ಹೆಚ್ಚಳದ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೧೭ (೮೯೬) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ವೇತನ ಹೆಚ್ಚಿಸಬೇಕೆಂದು ಒತ್ತಾಯಿಸಿ ಪ್ರತಿಭಟನೆ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಗೌರವಧನ ಹೆಚ್ಚಿಸುವುದು ಹಾಗೂ ನಿವೃತ್ತರಾದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗ್ರಾಚ್ಯುಯಿಟಿ ನೀಡುವ

ಕುರಿತು ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದಿರಲು ಕಾರಣಗಳೇನು ;

(ಇ) ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಹೊಣೆಯನ್ನು ಹೊತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಗೌರವಧನ ಹೆಚ್ಚಿಸುವುದು ಹಾಗೂ ನಿವೃತ್ತರಾದ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರಿಗೆ ಗ್ರಾಚ್ಯುಯಿಟಿ ನೀಡಲು ಯಾವ ಕಾಲಮಿತಿಯೊಳಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ?

## ವಸತಿ ನಿಲಯಗಳ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೧೮ (೯೬೧) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಎಷ್ಟು ವಸತಿ ನಿಲಯಗಳಿವೆ ; ಮತ್ತು ಅವುಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗಿದೆ ; (ಮಾಹಿತಿ ನೀಡುವುದು)

(ಆ) ಅನೇಕ ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಸಿಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಹೆಚ್ಚುವರಿ ವಸತಿ ನಿಲಯಗಳನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೆಚ್ಚುವರಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇದೆಯೇ ?

## ಎಸ್.ಸಿ./ಎಸ್.ಟಿ. ಅಭ್ಯರ್ಥಿಗಳಿಗೆ ಐ.ಎ.ಎಸ್/ಐ.ಪಿ.ಎಸ್. ತರಬೇತಿ ನೀಡುವ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೧೯ (೯೮೧) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭಾರತೀಯ ಆಡಳಿತ ಸೇವೆ (ಐಎಎಸ್) ಹಾಗೂ ಭಾರತೀಯ ಪೊಲೀಸ್ ಸೇವೆಗೆ (ಐಪಿಎಸ್) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅಭ್ಯರ್ಥಿಗಳು ಆಯ್ಕೆಯಾಗುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬರುತ್ತಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಎಷ್ಟು ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದೆ ;

(ಇ) ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಎಷ್ಟು ಜನ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಐಎಎಸ್/ಐಪಿಎಸ್ ಪರೀಕ್ಷೆಗೆ ಹಾಜರಾಗಿದ್ದಾರೆ ಹಾಗೂ ಉತ್ತೀರ್ಣರಾಗಿದ್ದಾರೆ ? (ಮಾಹಿತಿಯನ್ನು ಒದಗಿಸುವುದು)

## ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದ ಇಎಸ್ಐ ಆಸ್ಪತ್ರೆ ಬಳಕೆಯಾಗದೆ ದುಸ್ಥಿತಿಗೆ ತಲುಪಿರುವ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೧೨೦ (೯೧೪) ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕರೆ ಹೆಚ್ಚಾಗಿ ನೆಲಸಿರುವ ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದಲ್ಲಿ ಸುಸಜ್ಜಿತವಾದ ಇಎಸ್ಐ ಆಸ್ಪತ್ರೆ ನಿರ್ಮಾಣಗೊಂಡಿದ್ದು,

ಅದನ್ನು ಸಾರ್ವಜನಿಕರ ಆರೋಗ್ಯ ಸೇವೆಗೆ ಉಪಯೋಗಿಸದಿರಲು ಕಾರಣಗಳೇನು ;

(ಆ) ಈಗಾಗಲೇ ಸುಮಾರು ರೂ.೧೨ ಕೋಟಿಯಷ್ಟು ಆಧುನಿಕ ಯಂತ್ರೋಪಕರಣಗಳನ್ನು ಪೂರೈಸಿ ಎರಡು ವರ್ಷ ಕಳೆದರೂ ಇನ್ನೂ ಉಪಯೋಗವಾಗದೆ ದುಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಟ್ಟಡ ನಿರ್ಮಾಣಕ್ಕೆ ಮತ್ತು ಆಧುನಿಕ ಯಂತ್ರೋಪಕರಣ ಖರೀದಿಗೆ ವೆಚ್ಚ ಮಾಡಿದ ಸಾರ್ವಜನಿಕರ ಹಣ ಕಾರ್ಮಿಕರಿಗೂ ಮತ್ತು ಸುತ್ತಮುತ್ತಲು ಇರುವ ಹಳ್ಳಿಗಳ ಜನರಿಗೆ ಉಪಯೋಗವಾಗುವಂತೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು ;

(ಈ) ಶಹಾಬಾದ ಪಟ್ಟಣದ ಇಎಸ್‌ಐ ಆಸ್ಪತ್ರೆಯನ್ನು ರಾಜ್ಯ ಸರ್ಕಾರ ತನ್ನ ಆಧೀನಕ್ಕೆ ಪಡೆದು ಅದನ್ನು ನೂತನ ತಾಲ್ಲೂಕಾದ ಶಹಾಬಾದನ ತಾಲ್ಲೂಕು ಆಸ್ಪತ್ರೆ ಮತ್ತು ತಾಲ್ಲೂಕು ಆರೋಗ್ಯ ಕಛೇರಿಯನ್ನಾಗಿ ಬಳಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದೆ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಕಾಸೂ 883 – ಪಿ2

**List of Questions for Oral Answers**

**Total No. of Questions - 15**

# LIST - 08

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Friday, the 14th March, 2025

---

**GROUP - V**

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently abled and Senior Citizens

---

**CENTRE OF EXCELLANCE FOR STUDIES IN CLASSICAL KANNADA**

**Sri. Madhu G.Madegowda (Graduates' Constituency) -**

106 (1001) Will the Minister for Backward Classes Welfare and Kannada and Culture be pleased to state:-

a) whether 4.2 acre of land that has been provided for the Centre Of Excellence For Studies in Classical Kannada as per the decision of syndicate meeting of University of Mysore has been sanctioned in the name of the centre by obtaining the permission of the State Government; if so, the copy of sanctioning letter be furnished; if not, an appropriate reasons be furnished;

b) whether it is true that non availability of autonomous status to the centre is not obtained till date due to non registration of the site;

c) if so, Kannada language having an ancient history eventhough fifteen years have been elapsed after it was granted the classical language status, since it is not having its own site and building, it has not got an autonomous status hence the steps taken by the State Government till date regarding providing the site/ building and the autonomous status to this centre.

d) the copies of the letters which are written by the State Government to the Union Government for urging to provide autonomous status for the Centre of Excellence for Studies in Classical Kannada be furnished;

e) whether the Union or State Government has intended to shift the 'Centre of Excellence For Studies in Classical Kannada' from Mysuru to Bengaluru; if so, the reasons for the same; (complete details be furnished)

f) whether there is a consent of the State Government to establish the office of the said study centre in Mysuru itself?

## APPOINTMENT OF JUNIORS TO THE POST OF ASSISTANT DIRECTORS

**Sri Chidanand M.Gowda(Graduates' Constituency) -**

107 (951) Will the Minister for Rural Development and Panchayat Raj and Information Technology and Bio-Technology be pleased to state:-

a) the number of posts of Assistant Director of Rural Employment and Assistant Director of Panchayat Raj which are lying vacant in the State; (districtwise details be furnished)

b) the particular of circular based on which the temporary appointments have been made to the said posts;

c) whether it has come to the notice of the Government that juniors have been appointed by ignoring the seniors who have the seniority in many districts at present;

d) if so, the details of the serial number in the district seniority of the Panchayat Development Officers who have been appointed as Assistant Directors provisionally at present; the number of employees who are seniors in the seniority compared to them; the reasons for neglecting to appoint them; the steps taken by the Government for training to execute the said post;

e) since the same appointment have been carried out against the circular and service rules in this manner, whether it would cause decline of self-confidence alongwith breach of self respect among the employees;

f) the steps that would be taken by the Government to appoint the seniors who are senior in the seniority list by cancelling the said illegal appointment?

## PROVIDING INSURANCE FACILITY TO DIFFERENTLY ABLED PERSONS

**Sri Y.M.Satish (Local Authorities Constituency) -**

108 (881) Will the Minister for Women and Child Development and Empowerment of Differently abled and Senior Citizens be pleased to state:-

a) the particulars of schemes that have been provided by the Government with regard to health especially for differently abeld persons in the State; (information be furnished)

b) whether the Government would come forward to bear the health insurance to be used in both Government and private hospitals especially for differently abled persons; the stand of the Government in this regard; (information be furnished)

c) the prevailing impediments to provide minimum free health insurance by the Government for these persons who are struggling to lead their life; the decision of the Government to implement the same? (details be furnished)

## SCSP/TSP GRANT EARMARKED FOR THE WELFARE OF SCHEDULED CASTE AND SCHEDULED TRIBES

**Smt Hemalatha Nayak (Elected by Legislative Assembly) -**
**Sri Sharavana T.A. (Elected by Legislative Assembly) -**

109 (966+968) Will the Minister for Social welfare be pleased to state:-

a) the grant that has been earmarked and released under S.C.S.P/T.S.P Scheme for the welfare of scheduled caste and scheduled tribes from the year 2022-23 to 2024-25;

b) out of this grant, the amount that (june-2024) has been transferred by earmarking for the implementation of guarantee schemes by the State Government during the year 2023-24 and 2024-25; out of the transferred grant, the amount that has been utilized; (yearwise complete information during the year 2023-24 and 2024-25 be furnished)

c) the amount that has been spent for the beneficiaries of scheduled castes and scheduled tribes under guarantee schemes from the year 2023-24 and till the end of February-2025 of 2024-25; the number of beneficiaries of scheduled caste and scheduled tribes coming under each guarantee scheme; (the information as per each guarantee scheme be furnished)

d) if the earmarked amount for the welfare of scheduled categories has been transferred to the guarantee scheme, if the same has been utilized if there is no information of beneficiaries of scheduled caste and scheduled tribes and if they were not the beneficiaries, whether it would caused misuse of the amount of SCSP/TSP scheme and the violation of SCSP/TSP Act; whether it would caused set back for the welfare of dalits ;

e) whether it would be caused injustice for this community that the earmarked amount for the welfare of this communities under SCSP/STP scheme has been transferred to the guarantee scheme by the State Government; whether the grant should be utilized for the welfare of these categories has been utilized to other

purpose, whether it would caused the grabbing of constitutional rights of them;

f) whether there is a provision in the Act to utilise the earmarked grant under SCSP/TSP scheme for guarantee schemes; if not, the particular basis on which the said grant is being utilized; whether the step would be taken by the Government to utilize the amount that has been utilized for the implementation of this guarantee schemes again in SCSP/TSP scheme?

**MISAPPROPRIATION UNDER MGNREGA SCHEME**

**Sri Govinda Raju (Elected by Legislative Assembly) -**

110 (906) Will the Minister for Rural Development and Panchayat Raj and Information Technology and Bio-Technology be pleased to state:-

a) the grant that has been released so far by the Central Government for the Mahatma Gandhi National Rural Employment Guarantee Scheme during the last 5 years; whether the released grant has been utilized completely;

b) whether it is true that it has been found in the audit report that Rs.669.92 crore has been misappropriated in a year in the State; if so, the particular of the Department in which the amount that has been misappropriated; (complete details thereof be furnished)

c) whether Rs.2.89 crores of rupees has been provided in the form of wages in the name of deceased persons in various districts of the State; if so, the steps taken by the Government in this regard after the number of such cases have came to the light;

d) whether it has come to the notice of the Government that out of the amount of wage for the works that have been taken up from the year 2013-14 to 2022-23, there is non-submission of any document for the amount Rs.4,500 crores; if so, responsibility of the concerned Officers?

## BUILDING FACILITY TO KONKANI SAHITYA ACADEMY

**Sri Ivan D'Souza (Elected by Legislative Assembly) -**

111 (945) Will the Minister for Backward Classes Welfare and Kannada and Culture be pleased to state:-

a) whether it has come to the notice of the Government that the activities of Konkani have not been carried out without completion of the building of Konkani Sahitya Academy ; and the date on which the same would be completed; the steps taken by the Government to provide the grant for this building; (details be furnished)

b) the reasons for the step has not been taken to complete the construction of the building of Konkani Academy eventhough the same has been incomplete; (details be furnished)

c) the number of programmes which have been taken up by the Konkani Sahitya Academy during 2023-24 and 2024-25; the grant has been provided for the same; (details be furnished)

d) since the activities of Konkani Academy has been extended to various districts, the reasons for the step has not been taken by the Government to provide the vehicle facility to President to participate in the same; the date on which the step would be taken in this regard; (details be furnished)

e) there is a demand that the honorarium would be enhanced for the members of the academy, whether the step would be taken by the Department; and whether the step would be taken to provide minimum Rs.10,000/- per month; (details be furnished)

f) the number of students who are studying Konkani language in the State; whether the step taken by the Government to teach the Konkani in P.U.C; the number of teachers have been recruited; the expenditure incurred for the same? (details be furnished)

## PROVIDING KIT FOR WORKERS SUFFERING FORM ANEMIA

**Sri N.Ravikumar (Elected by Legislative Assembly) -**

112 (875) Will the Minister for Labour be pleased to state:-

a) the particulars of items which are provided in the kit given to the construction workers who are suffering from anemia; (details be furnished)

b) the authority who made the recommendation that the ayurvedic medicines should be provided for 34,000 workers in the jurisdiction of each labour commissioner; the particular of the recommendation of medical board based on which the ayurvedic nutrition kit will be provided; (details be furnished)

c) the authority who have given the report with accuracy that there are 33,500 construction workers suffering from anemia in the jurisdiction of each labour commissioner; the particular of doctor by whom and the method from which the test has been carried out that the workers are suffering from anemia; (the details alongwith medical record of all workers be furnished)

d) the stand of the Government with regard to Rs.75 crores of corruption has been occurred in the nutrition kit that is being provided for construction workers and their dependents? (details be furnished)

## CONSTRUCTION OF CULTURAL HALL IN BASAVAKALYANA

**Dr.M.G.Muley (Elected by Legislative Assembly) -**

113(1002) Will the Minister for Backward Classes Welfare and Kannada and Culture be pleased to state:-

a) the Government has declared that Vishwaguru Basaveshwara as the cultural ambassador of Karnataka, whether any programmes have been chalked out by the Government which is supplementary for the same; if not, the contemplation of the Government in this regard;

b) whether there is a cultural hall for pubilicizing the Vachanas of Sharanas and to conduct music concerts, drama and other cultural programmes in Basavakalyana

of Bidar district; if not, whether the plan would be chalked out to construct the cultural hall;

c) the timelimit within which the same would be constructed by earmarking the amount?

**PROVIDING E-KHATHA FOR RESIDENTS**

**Sri T.N.Javarayi Gowda (Elected by Legislative Assembly) -**

114 (901) Will the Minister for Rural Development and Panchayat Raj and Information Technology and Bio-Technology be pleased to state:-

a) whether it has come to the notice of the Government that non issuance of title deeds for the residents who are residing by building their house from several years in Gramthana, Uruguppe survey number in the villages in the limits Gram Panchayats of the State; if so, the steps taken by the Government; (details be furnished)

b) the instruction has been given for the process of issuing E-Khatha in the mission mode of E-Khatha drive in the limits of Local Bodies and Gram Panchayat, whether the Government Order has been executed in this regard; (details along with the copy of Government circular/order be furnished)

c) it is showing as villagers in the R.T.C of the property which are in the Survey number of Gramthana and Uruguppe, whether there is a possibility to create R.T.C for such properties; whether there is a possibility to make land conversion; whether the Government would make facilitate to the public by resolving this problem? (information be furnished)

**PROGRAMMES OF CORPORATIONS IN THE LIMITS OF SOCIAL WELFARE DEPARTMENT**

**Sri Manjunatha Bhandari (Local Authorities Constituency) -**

115 (984) Will the Minister for Social Welfare be pleased to state:-

a) the number of corporations in the limits of Social Welfare Department; the particulars there of and the purposes for which these have been established;

b) the particular of organizations through which the fairs are being organized under the various corporations; the particulars of the programme for which the amount is being spent; the amount that has been spent for the fairs so far; the benefits of the organizing the fairs; (yearwise and programmewise information be furnished)

c) the grant that has been spent for beneficiary based direct facility schemes under various corporations; the amount that has been spent for other developmental programmes; (corporationwise and programmewise information be furnished)

d) the amount that has been spent for other development works excluding beneficiary based direct facility scheme;

e) the particulars of programmes that have been taken up under various corporations for the protection of the Constitution of India; the particular of Organizations through which this programmes have been taken up and the amount that has been spent for the same? (corporationwise and programmewise information be furnished)

**LACUNAS IN THE IMPLEMENTATION OF JAL JEEVAN MISSION PROJECT**

**Sri C.T.Ravi (Elected by Legislative Assembly) -**

116 (926) Will the Minister for Rural Development and Panchayat Raj and Information Technology and Bio-Technology be pleased to state:-

a) the date on which Jal Jeevan Mission Project has been commenced which is providing potable water by connecting the taps to every household in the State; the grant that has been released by the Central Government for the same till date; the grant that has been released from the State Government as an adjustment amount; (districtwise information be furnished)

b) the number of villages of the State in which water is being supplied successfully by completing the works; the number of pending works; the amount that has been borne for the works which have been taken up under the said scheme so far; (workwise and districtwise details be furnished)
c) whether it has come to the notice of the Government that several lacunas are occurring during the implementation of the works of this project; if so, the steps taken by the Government to rectify the same; (details be furnished)
d) the steps taken by the Government to make this project as a successful project and to complete the same rapidly? (details be furnished)

**ENHANCEMENT OF HONORARIUM FOR ANGANWADI STAFF**

**Sri Prathap Simha Nayak K. (Elected by Legislative Assembly) -**

117 (896) Will the Minister for Women and Child Development and Empowerment of Differently abled and Senior Citizens be pleased to state:-

a) whether it has come to the notice of the Government that Anganwadi workers and helpers who are working in the Anganwadis in the State have staged a protest urging for enhancement of the honorarium;
b) if so, the reasons for not taken any step till date with regard to enhancement of honorarium for Anganwadi workers and helpers and to provide the gratuity for all retired Anganwadi workers and helpers;
c) the timelimit within which the necessary steps would be taken for the enhancement of honorarium for Anganwadi workers and helpers who have the responsibility for delivering the Government schemes to the people and to provide gratuity for all retired Anganwadi workers and helpers?

## REGARDING HOSTELS

**Sri Sunilgouda Patil (Local Authorities Constituency) -**

118 (961) Will the Minister for Backward Classes Welfare And Kannada And Culture be pleased to state:-

a) the number of hostels which are coming under Backward Classes Welfare Department in Vijayapur and Bagalkot districts; out of which, the number of students to whom the opportunity has been provided; (information be furnished)

b) whether it has come to the notice of the Government that the hardship is being faced by many students without getting hostel facility; if so, the steps taken by the Government to commence the hostels additionally;

c) whether the proposal is before the Government to establish the additional hostels for the convenience of students?

## IAS/IPS COACHING FOR SC/ST CANDIDATES

**Sri C.N Manje Gowda (Local Authorities Constituency) -**

119 (981) Will the Minister for Social Welfare be pleased to state:-

a) whether necessary coaching programmes are being chalked out by the Government with regard to selection of scheduled caste and scheduled tribes candidates to Indian Administrative Service (IAS) and Indian Police Service (IPS);

b) if so, the number of scheduled caste and scheduled tribes candidates to whom the coaching has been provided during the last 3 years;

c) the number of scheduled caste and scheduled tribes students who have appeared, cleared in the IAS/IPS examination in the State during last 3 years ? (information be furnished)

## ESI HOSPITAL IN SHAHABAD TOWN OF KALABURAGI DISTRICT

**Dr.Talwar Sabanna(Nominated) -**

120 (914) Will the Minister for Labour be pleased to state:-

a) well-equipped ESI Hospital has been constructed in Shahabad town of Kalaburagi district where most of the labourers are residing there, the reasons for the same has not been utilized for the public health services;

b) two years have been elapsed since the supply of modern equipments worth around Rs.12 crores, whether it has come to the notice of the Government that the said equipments have reached a worse condition without being used;

c) the steps that would be taken to make use of the public amount that has been spent for the construction of building and purchase of modern equipment for workers and people of the surrounding villages;

d) whether an appropriate steps would be taken by the State Government to utilize the ESI hospital of Shahabad taluk into the Taluk Hospital and Taluk Health Office of New Taluk by taking into its possession?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru - WD -844 - Copies